# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-47/2013/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 8/09/2016

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ:** ಶ್ರೀ.ಭಾಸ್ಕರ್, ತಹಶೀಲ್ದಾರ್, ಚಿಕ್ಕಬಳ್ಳಾಪುರ ತಾಲ್ಲೂಕು, (2) ಶ್ರೀ.ನಿರಂಜನಾರಾಧ್ಯ, ಸರ್ವೆಯರ್, (3) ಶ್ರೀ.ಜಿ.ಟಿ.ಮುನಿಕೃಷ್ಣ, ರಾಜಸ್ವ ನಿರೀಕ್ಷಕರು, ಮತ್ತು (4) ಶ್ರೀ.ಕೆ.ರಾಮಮೋಹನ್, ಪ್ರಥಮ ದರ್ಜೆ ಸಹಾಯಕರು, ತಾಲ್ಲೂಕು ಕಚೇರಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ, – ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಕರ್ತವ್ಯಲೋಪ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

******

1) ಶ್ರೀಮತಿ.ಗೌರಮ್ಮ ಕೋಂ ಲೇಟ್.ನಾರಾಯಣಸ್ವಾಮಿ, ಸೊಣ್ಣಾಪುರ ಗ್ರಾಮ, ನಂದಿ ಹೋಬಳಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ (1) ಶ್ರೀ.ಭಾಸ್ಕರ್, ತಹಶೀಲ್ದಾರ್, ಚಿಕ್ಕಬಳ್ಳಾಪುರ ತಾಲ್ಲೂಕು, (2) ಶ್ರೀ.ನಿರಂಜನಾರಾಧ್ಯ, ಸರ್ವೆಯರ್, (3) ಶ್ರೀ.ಜಿ.ಟಿ.ಮುನಿಕೃಷ್ಣ, ರಾಜಸ್ವ ನಿರೀಕ್ಷಕರು, (4) ಶ್ರೀ.ಕೆ.ರಾಮಮೋಹನ್, ಪ್ರಥಮ ದರ್ಜೆ ಸಹಾಯಕರು, ತಾಲ್ಲೂಕು ಕಚೇರಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ, ಮತ್ತು (5) ಕಾರ್ಯದರ್ಶಿ, ನಯನಹಳ್ಳಿ ಪಂಚಾಯಿತಿ, ಚಿಕ್ಕಬಳ್ಳಾಪುರ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಸೊಣ್ಣಾಪುರ ಸ.ನಂ.29 ರಲ್ಲಿ 6/26 ಗುಂಟೆ ಜಮೀನಿದ್ದು, ಇದರಲ್ಲಿ ಶ್ರೀ.ಮುನಿಯಪ್ಪ ಬಿನ್ ಹನುಮಂತಪ್ಪ, ಆಂಜಿನಪ್ಪ ಬಿನ್ ದೊಡ್ಡಬೈರಪ್ಪ, ಶಾಂತಮ್ಮ ಕೋಂ ಮುನಿಯಪ್ಪ ಮತ್ತು ಗೌರಮ್ಮ ಕೋಂ ಲೇಟ್ ನಾರಾಯಣಸ್ವಾಮಿಯವರು ನಮೂನೆ 50 ಆರ್.ಯು.ಓ.ಎಸ್.ಆರ್.222/91-92 ಹಾಗೂ 53 636/99-2000 ಅರ್ಜಿಗಳನ್ನು ಸಲ್ಲಿಸಿದ್ದು, ಅದರಂತೆ ಅವರವರ ಸ್ವಾಧೀನಾನುಭವಗಳಲ್ಲಿ ಅವರುಗಳಿದ್ದು, ತಾಲ್ಲೂಕು ಸರ್ವೆಯರ್ ಬಂದು ಸ್ಥಳ ತನಿಖೆ ಮಾಡಿ ಕಾರ್ಯದರ್ಶಿಗಳು, ರಾಜಸ್ವ ನಿರೀಕ್ಷಕರ ಮತ್ತು ಊರಿನ ಗ್ರಾಮಸ್ಥರ ರೂಬುರೂಬು ಅನುಭವದಂತೆ ಸ್ಕೆಚ್ ತಯಾರಿಸಿ ರಾಜಸ್ವ ನಿರೀಕ್ಷಕರಿಗೆ ಕೊಟ್ಟಿರುತ್ತಾರೆ. ಅದರಂತೆ ಮಹಜರ್ ವರದಿಯನ್ನು ಮಾಡಿ ಕಡತವನ್ನು ತಯಾರಿಸಿ ಮಂಜೂರು ಮಾಡಿರುತ್ತಾರೆ. ಆ ಪ್ರಕಾರ ಶಾಂತಮ್ಮ ಕೋಂ ಮುನಿಯಪ್ಪರವರಿಗೆ ಆರ್.ಯು.ಓಎಸ್.ಆರ್.222/91-92 ರಂತೆ 0.29 ಗುಂಟೆ ಜಮೀನನ್ನು ಈಗಾಗಲೇ ಮಂಜೂರು ಮಾಡಿ ಖಾತೆ ನಂ.70, ಎಂ.ಆರ್.1/98-99 ರಂತೆ ಪಹಣಿಯನ್ನು ನಮೂದಿಸಿ

ಕೊಟ್ಟಿರುತ್ತಾರೆ. ಇದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಅರ್ಜಿ ಮೂಲಕ ತಾಲ್ಲೂಕು ಕಚೇರಿಯಲ್ಲಿ ಕೇಳಿದಾಗ ತಮ್ಮ ಇಲಾಖೆಯಲ್ಲಿ ಆರ್.ಯು.ಓ.ಎಸ್.ಆರ್.222/91-92 ರಂತೆ ಅಭಿಲೇಖಾಲಯದಲ್ಲಿ ಕಡತವನ್ನು ಪರಿಶೀಲನೆ ಮಾಡಲಾಗಿ ನೀವು ಕೇಳಿರುವ ಕಡತವು ಸಧ್ಯಕ್ಕೆ ಲಭ್ಯವಿಲ್ಲ. ಆದ್ದರಿಂದ, ಕೊಡಲು ರಹ ಇರುವುದಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಅದೇರೀತಿ ಆರ್.ಯು.ಓ.ಎಸ್.ಆರ್.636/99-2000 ರಂತೆ ನಮೂನೆ 53 ನ್ನು ಗೌರಮ್ಮ ಕೋಂ ಲೇಟ್ ನಾರಾಯಣಸ್ವಾಮಿಯವರು ಸಲ್ಲಿಸಿದ್ದು, ಅದರಂತೆ 2010 ರಲ್ಲಿ ದೂರುದಾರರು ಸ್ವಾಧೀನದಲ್ಲಿರುವಂತಹ 1.03 ಗುಂಟೆ ಕಡತವನ್ನು ತಯಾರಿಸಿ ಮಂಜೂರು ಮಾಡಿಕೊಡಲು ಅರ್ಜಿ ಸಲ್ಲಿಸಿದ್ದು, ದೂರುದಾರರ ಅರ್ಜಿಯನ್ನು ಪಕ್ಕ ಇಟ್ಟು ಕೋರ್ಟ್ ಆದೇಶ ಓ.ಎಸ್.ನಂ.220/2007 ರಂತೆ ದಿ.27/2/2007 ರಂತೆ ಶಾಶ್ವತ ಪ್ರತಿಬಂಧಕಾಜ್ಞೆ ಇದ್ದರೂ ಸಹ ಉಲ್ಲಂಘನೆ ಮಾಡಿ ತಹಶೀಲ್ದಾರ್‌ರವರು ಸ್ಥಳ ತನಿಖೆ ಮಾಡದೆ ಶಾಂತಮ್ಮ ಕೋಂ ಮುನಿಯಪ್ಪ ರವರಿಗೆ 0.38 ಗುಂಟೆ ಜಮೀನನ್ನು ಮಂಜೂರು ಮಾಡಿ ಖಾತೆ ನಂ.28 ಎಂ.ಆರ್.ಹೆಚ್.2/2012-13 ದಿ.8/10/12 ರಂತೆ ಪಹಣಿಯನ್ನು ನಮೂದಿಸಿ ಕೊಟ್ಟಿರುತ್ತಾರೆ. ಈ ಬಗ್ಗೆ ಪರಿಶೀಲನೆ ಮಾಡಿ ಎದುರುದಾರರ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಶ್ರೀಮತಿ.ಶಾಂತಮ್ಮ ಕೋಂ ಬಿ.ಮುನಿಯಪ್ಪ ಸೊನ್ನಾಪುರ ರವರು ಸೊನ್ನಾಪುರ ಗ್ರಾಮದ ಸ.ನಂ.29 ರಲ್ಲಿ 0.38 ಗುಂಟೆ ಜಮೀನಿನಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮೀಕರಣ ಗೊಳಿಸಲು ಕೋರಿ ನಮೂನೆ 53 ರಲ್ಲಿ ಅರ್ಜಿ ಸಲ್ಲಿಸಿರುವ ಬಗ್ಗೆ ರಾಜಸ್ವ ನಿರೀಕ್ಷಕರು, ನಂದಿ ಹೋಬಳಿ ಹಾಗೂ ತಾಲ್ಲೂಕು ಸರ್ವೆಯರ್‌ರವರು ಸ್ಥಳ ಪರಿಶೀಲನೆ ಮಾಡಿ ಶ್ರೀಮತಿ.ಶಾಂತಮ್ಮ ಕೋಂ ಬಿ.ಮುನಿಯಪ್ಪ ರವರು 16 ವರ್ಷಗಳಿಂದ ಸದರಿ ಜಮೀನಿನಲ್ಲಿ ಬಗರ್ ಹುಕುಂ ವ್ಯವಸಾಯ ಮಾಡಿಕೊಂಡು ಅನುಭವದಲ್ಲಿರುತ್ತಾರೆಂದು ಹಾಗೂ ಬಗರ್ ಸಾಗುವಳಿ ಜಮೀನನ್ನು ಶ್ರೀಮತಿ.ಶಾಂತಮ್ಮ ರವರಿಗೆ ಸಕ್ರಮೀಕರಣ ಗೊಳಿಸಲು ಅರ್ಹರಿರುತ್ತಾರೆಂದು ತಿಳಿಸಿದ್ದರಿಂದ, ಕಡತವನ್ನು ಸಮಿತಿಯ ಮುಂದೆ ಮಂಡಿಸಲು ಅಂದಿನ ತಹಶೀಲ್ದಾರ್ ಆದೇಶಿಸಿರುತ್ತಾರೆ. ದಿ.29/4/11 ರಂದು ಕಡತವನ್ನು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣದ ಮುಂದೆ ಮಂಡಿಸಿದ್ದು, ಸಮಿತಿ ಸದರಿ ಜಮೀನನ್ನು ಶ್ರೀಮತಿ.ಶಾಂತಮ್ಮ ರವರ ಹೆಸರಿಗೆ ಸಕ್ರಮೀಕರಣ ಗೊಳಿಸಲು ಸೂಚಿಸಿರುತ್ತಾರೆ. ಸಮಿತಿಯ ಒಪ್ಪಿಗೆಯಂತೆ ಸಾರ್ವಜನಿಕರು ಹಾಗೂ ಹಿತಾಸಕ್ತರಿಂದ ಏನಾದರೂ ತಂಟೆ ತಕರಾರುಗಳು ಇದ್ದಲ್ಲಿ ತಿಳಿಸಲು ಸೂಚಿಸಿ ದಿ.2/5/11 ರಂದು ಗ್ರಾಮದಲ್ಲಿ ಪ್ರಚುರ ಪಡಿಸಿರುತ್ತದೆ. ನಿಗದಿತ ಅವಧಿಯಲ್ಲಿ ಯಾವುದೇ ತಂಟೆ ತಕರಾರು ಬರದೇ ಇರುವುದರಿಂದ ಮತ್ತೊಮ್ಮೆ ಸಮಿತಿಯ ಮುಂದೆ ದಿ.16/5/2011 ರಂದು ಮಂಡಿಸಿ ಶ್ರೀಮತಿ.ಶಾಂತಮ್ಮ ಕೋಂ ಬಿ.ಮುನಿಯಪ್ಪ ರವರಿಗೆ ಜಮೀನು ಮಂಜೂರು ಮಾಡಿ ಸಾಗುವಳಿ ಚೀಟಿ ನೀಡಲು ಸಮಿತಿ ತೀರ್ಮಾನಿಸಿರುತ್ತದೆ. ಕಡತವನ್ನು ಹಿಂದೆಯೇ ಸಮಿತಿಯ ತೀರ್ಮಾನ ತೆಗೆದುಕೊಂಡಿದ್ದರಿಂದ, ಸಮಿತಿಯ ತೀರ್ಮಾನದಂತೆ ಅಧಿಕೃತ ಜ್ಞಾಪನ ಹೊರಡಿಸಿ ಸಾಗುವಳಿ ಚೀಟಿಯನ್ನು ನೀಡಿರುತ್ತದೆ. ದಿ.22/7/11 ರಂದು ಚಿಕ್ಕಬಳ್ಳಾಪುರ ತಾಲ್ಲೂಕಿನ ತಹಶೀಲ್ದಾರ್ ಆಗಿ ಕಾರ್ಯನಿರ್ವಹಿಸಿಕೊಂಡಿದ್ದು, ಅದಕ್ಕಿಂತ ಮುಂಚಿತವಾಗಿ ಈ ವಿಷಯದಲ್ಲಿ ಸಮಿತಿಯ ಒಪ್ಪಿಗೆ ಮತ್ತು ತಕರಾರು ಅವಧಿ ಮುಗಿದಿದ್ದರಿಂದ ಸಮಿತಿಯ ತೀರ್ಮಾನಕ್ಕೆ ಯಾವುದೇ ತಕರಾರು ಇಲ್ಲದೇ

ಇರುವುದರಿಂದ, ಮತ್ತೆ ವಿಚಾರಣೆ ಮಾಡುವ ಅವಶ್ಯ ಕಂಡುಬರದೇ ಇರುವುದರಿಂದ ಕಾನೂನು ರೀತ್ಯ ಅಧಿಕೃತ ಜ್ಞಾಪನ ಹೊರಡಿಸಿ ಸಾಗುವಳಿ ಚೀಟಿ ನೀಡಿರುತ್ತಾರೆಂದು ತಿಳಿಸಿರುತ್ತಾರೆ.

4) 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ ಸೊನ್ನಾಪುರ ಗ್ರಾಮದ ಸ.ನಂ.29 ರ ಪೈಕಿ ಮಾನ್ಯ ತಹಶೀಲ್ದಾರ್‌ರವರ ಕಡತದ ಸಂ.ಆರ್.ಯು.ಸಿ.ಎಸ್.ಆರ್.(ಎನ್) 27/94-95 ರಲ್ಲಿ ಆದೇಶ ನೀಡಿದಂತೆ ಅವರು ಹಾಗೂ ರಾಜಸ್ವ ನಿರೀಕ್ಷಕರು ಹಾಗೂ ಅರ್ಜಿದಾರರು ಸ್ಥಳಕ್ಕೆ ಭೇಟಿ ನೀಡಿ ಅರ್ಜಿದಾರರು ಸ್ವಾಧೀನಾನುಭವ ಹೊಂದಿರುವುದಾಗಿ ತೋರಿಸಿರುವ ಪ್ರದೇಶವನ್ನು ರಾಜಸ್ವ ನಿರೀಕ್ಷಕರ ಸಮಕ್ಷಮ ಅಳತೆ ಮಾಡಿ ರೆವಿನ್ಯೂ ನಕ್ಷೆ ತಯಾರಿಸಿ ಕಚೇರಿಗೆ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.

5) 3ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಸೊನ್ನಾಪುರ ಗ್ರಾಮದ ಸ.ನಂ.29 ರ ಪೈಕಿ 0.38 ಜಮೀನು ಆರ್.ಯು.ಓ./ಎಸ್.ಆರ್.636/99-2000 ದಿ.26/1/2008 ರಂದು ಬಿ.ಚಿಕ್ಕನಾರಾಯಣಪ್ಪ, ರಾಜಸ್ವ ನಿರೀಕ್ಷಕರು ದರಖಾಸ್ತು ಕಡತ ತಯಾರಿಸಿರುತ್ತಾರೆ. ಸದರಿ ರಾಜಸ್ವ ನಿರೀಕ್ಷಕರು ನಿವೃತ್ತಿಯಾಗಿರುತ್ತಾರೆ. ಹಾಲಿ ಜಿ.ಟಿ.ಮುನಿಕೃಷ್ಣ ರಾಜಸ್ವ ನಿರೀಕ್ಷಕರು ಸಂಬಂಧಪಟ್ಟ ದರಖಾಸ್ತು ಕಡತ ತಯಾರಿಸಿರುವುದಿಲ್ಲ. ಸಂಬಂಧಪಟ್ಟ ಜಮೀನಿನ ಬಗ್ಗೆ ಭೂಮಂಜೂರಿ ಸಭೆಯ ತೀರ್ಮಾನದಂತೆ ಮತ್ತು ಮಾನ್ಯ ತಹಶೀಲ್ದಾರ್‌ರವರ ಆದೇಶದಂತೆ ವಹಿವಾಟುಗಳು ನಡೆದಿದ್ದು, ಸದರಿ ಜಮೀನಿನ ಬಗ್ಗೆ ಹಾಲಿ ರಾಜಸ್ವ ನಿರೀಕ್ಷಕರಾದ ಜಿ.ಟಿ.ಮುನಿಕೃಷ್ಣ ರವರಿಗೆ ಯಾವುದೇ ಸಂಬಂಧವಿರುವುದಿಲ್ಲವೆಂದು ಹೇಳಿರುತ್ತಾರೆ.

6) 4ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಶ್ರೀಮತಿ.ಗೌರಮ್ಮ ಇವರು ದಿ.28/6/13 ರಂದು ಕಚೇರಿಗೆ ನೀಡಿರುವ ದೂರು ಅರ್ಜಿಯಲ್ಲಿ ವಿವರಿಸಿರುವಂತೆ ಆ ಸಮಯದಲ್ಲಿ ಅವರು ದರಖಾಸ್ತು ಗುಮಾಸ್ತನಾಗಿ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ದರಖಾಸ್ತು ಕಡತಗಳು ಸಂಬಂಧಪಟ್ಟ ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಿಗರು ಹಾಗೂ ಮೋಜಣಿದಾರರಿಂದ ತಯಾರಿಸಲ್ಪಟ್ಟು ಕಚೇರಿಗೆ ಕಡತವು ಬಂದ ನಂತರ ಆ ಕಡತದ ವಿಚಾರದಲ್ಲಿ ಕಚೇರಿಯ ಮುಖ್ಯಸ್ಥರಾದ ತಹಶೀಲ್ದಾರ್‌ರವರು ಸ್ಥಳ ತನಿಖೆ ಮಾಡಿದ ನಂತರ ಕಡತವನ್ನು ಭೂ ಸಕ್ರಮೀಕರಣ ಸಮಿತಿಯ ಮುಂದೆ ತರಲಾಗುವುದು. ಸಮಿತಿಯ ತೀರ್ಮಾನದಂತೆ ಮಂಜೂರಿ ಕ್ರಮ ಕೈಗೊಳ್ಳಲಾಗುತ್ತದೆ. ಕಚೇರಿಯಲ್ಲಿ ಕಾರ್ಯ ನಿರ್ವಹಿಸುವ ಗುಮಾಸ್ತರ ವೈಯಕ್ತಿಕ ತೀರ್ಮಾನವಿರುವುದಿಲ್ಲವೆಂದು ಹೇಳಿರುತ್ತಾರೆ.

7) 5ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ದೂರುದಾರರು ನೀಡಿದ ದೂರಿನ ಪತ್ರಗಳನ್ನು ಪರಿಶೀಲಿಸಿದಾಗ, ಈ ಪ್ರಕರಣವು ಅವರ ಗ್ರಾಮಪಂಚಾಯಿತಿಗೆ ಸಂಬಂಧಿಸಿಲ್ಲವೆಂದು ತಿಳಿದು ಕೂಡಲೇ ಸದರಿ ಗ್ರಾಮಕ್ಕೆ ಸಂಬಂಧಪಟ್ಟ ಕಂದಾಯ/ಗ್ರಾಮ ಲೆಕ್ಕಾಧಿಕಾರಿಗಳಿಗೆ ಜಾರಿ ಮಾಡಿ ಸ್ವೀಕೃತಿಯನ್ನು ಪಡೆದಿರುತ್ತಾರೆ. ಸಂಬಂಧಪಟ್ಟ ಪ್ರಕರಣದ ಬಗ್ಗೆ ಸದರಿ ಗ್ರಾಮಕ್ಕೆ ಭೇಟಿ ನೀಡಿ ಪ್ರಕರಣದ ಬಗ್ಗೆ ಶ್ರೀಮತಿ.ಗೌರಮ್ಮ ರವರನ್ನು ವಿಚಾರಿಸಿದಾಗ, ಅವರು ಮಾನ್ಯ ಕರ್ನಾಟಕ ಲೋಕಾಯುಕ್ತರವರಲ್ಲಿ ಕಂದಾಯ ಇಲಾಖೆಯ ಕಾರ್ಯದರ್ಶಿ/ಗ್ರಾಮ ಲೆಕ್ಕಾಧಿಕಾರಿ ಮೇಲೆ ದೂರು ನೀಡಿರುವುದಾಗಿ ಹಾಗೂ

ಪ್ರಕರಣದಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯವರಿಗೆ ಯಾವುದೇ ರೀತಿಯ ಸಂಬಂಧವಿರುವುದಿಲ್ಲವೆಂದು ತಿಳಿಸಿ ಹೇಳಿಕೆ ನೀಡಿರುತ್ತಾರೆಂದು ತಿಳಿಸಿರುತ್ತಾರೆ.

8) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ದೂರಿನಲ್ಲಿ ಹೇಳಿರುವ ವಿಚಾರಗಳನ್ನು ಪುನರುಚ್ಚರಿಸಿರುತ್ತಾರೆ.

9) ದೂರುದಾರರು ಹಾಜರು ಪಡಿಸಿರುವ ಆರ್.ಯು.ಎಸ್.ಆರ್.636/99-2000 ಪ್ರಕರಣದ ಸ್ಕೆಚ್‌ನ್ನು ಗಮನಿಸಿದಾಗ, ಶಾಂತಮ್ಮ 0.30 ಗುಂಟೆ ಮತ್ತು ಗೌರಮ್ಮ 1.03 ಎಕರೆ ಜಮೀನಿನ ಸ್ವಾಧೀನದಲ್ಲಿರುವುದನ್ನು ತಾಲ್ಲೂಕು ಸರ್ವೆಯರ್, ಚಿಕ್ಕಬಳ್ಳಾಪುರ ಇವರು ಗುರುತಿಸಿರುವುದು ಕಂಡುಬರುತ್ತದೆ. ದಿ.15/3/12 ರಂದು ತಹಶೀಲ್ದಾರ್, ಚಿಕ್ಕಬಳ್ಳಾಪುರ ತಾಲ್ಲೂಕು ಇವರು ನೀಡಿರುವ ಅಧಿಕೃತ ಜ್ಞಾಪನವನ್ನು ಪರಿಶೀಲಿಸಿದಾಗ, ಶಾಂತಮ್ಮ ಎನ್ನುವವರು ಸ್ವಾಧೀನದಲ್ಲಿರುವ 0.38 ಗುಂಟೆ ಜಮೀನನ್ನು ಬಗರ್ ಹುಕುಂ ಸಾಗುವಳಿಯಲ್ಲಿರುವ ಪ್ರದೇಶವೆಂದು ಅದನ್ನು ಸಕ್ರಮ ಗೊಳಿಸಿರುವುದು ಕಂಡುಬರುತ್ತದೆ. ಆ ಬಗ್ಗೆ ದಿ.8/6/12 ರಂದು ಶಾಂತಮ್ಮ ಎನ್ನುವವರಿಗೆ ಹಕ್ಕುಪತ್ರವನ್ನು ನೀಡಿರುವುದು ಕಂಡುಬರುತ್ತದೆ. ನಂದಿ ಹೋಬಳಿ, ಸೊನ್ನಾಪುರ ಗ್ರಾಮದ ಸ.ನಂ.29 ರ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ, ಎಂ.ಆರ್.1/98-99 ರಂತೆ 0.29 ಗುಂಟೆ ಹಾಗೂ ಎಂ.ಆರ್. ಹೆಚ್.2/2012-13 ರಂತೆ 0.38 ಗುಂಟೆ ಜಮೀನನ್ನು ಶಾಂತಮ್ಮ ಎನ್ನುವವರ ಹೆಸರಿಗೆ ಮ್ಯುಟೇಷನ್ ಆದೇಶ ಮಾಡಿರುವುದು ಕಂಡುಬರುತ್ತದೆ. ಪಹಣಿ ಪತ್ರಕೆಯ ಕಾಲಂ ನಂ.10 ರಲ್ಲಿ ಮಂಜೂರು ಎಂದು ದಾಖಲಾಗಿರುವುದು ಕಂಡುಬರುತ್ತದೆ. ಪಹಣಿ ಪತ್ರಿಕೆಯನ್ನು ಗಮನಿಸಿದಾಗ, ಒಂದೇ ಸರ್ವೆ ನಂಬರಿನಲ್ಲಿ ಶಾಂತಮ್ಮ ಎನ್ನುವವರಿಗೆ 2 ಬಾರಿ ಜಮೀನು ಮಂಜೂರಿ ಮಾಡಿರುವುದು ಕಂಡುಬರುತ್ತದೆ. ಒಂದೇ ಮಹಿಳೆಗೆ 2 ಬಾರಿ ಜಮೀನನ್ನು ಮಂಜೂರು ಮಾಡಿರುವ ಬಗ್ಗೆ ಎದುರುದಾರರು ಯಾವುದೇ ಸಮಜಾಯಿಷಿಯನ್ನು ನೀಡಿರುವುದಿಲ್ಲ.

10) ಅಪರ ಸಿವಿಲ್ ನ್ಯಾಯಾಲಯ, ಚಿಕ್ಕಬಳ್ಳಾಪುರ ಇಲ್ಲಿ ಸಲ್ಲಿಸಿರುವ ಅಸಲು ದಾವಾ 220/2002 ರ ತೀರ್ಪಿನ ನಕಲನ್ನು ದೂರುದಾರರು ಹಾಜರು ಪಡಿಸಿದ್ದು, ಅದನ್ನು ಪರಿಶೀಲಿಸಿದಾಗ, ಈ ಪ್ರಕರಣದ ದೂರುದಾರರು ಸದರಿ ದಾವಾವನ್ನು ಶಾಶ್ವತ ಪ್ರತಿಬಂಧಕಾಜ್ಞೆ ಕೋರಿ ಸಲ್ಲಿಸಿರುವುದು ಹಾಗೂ ಸದರಿ ದಾವಾವು ದೂರುದಾರರ ಪರವಾಗಿ ಡಿಕ್ರಿಯಾಗಿರುವುದು ಕಂಡುಬರುತ್ತದೆ. ದೂರುದಾರರು ಸದರಿ ದಾವಾವನ್ನು ಸೊನ್ನಾಪುರ ಗ್ರಾಮದ ಸ.ನಂ.29 ರ 1.3 ಎಕರೆ ಜಮೀನಿಗೆ ಹೂಡಿರುವುದು ಕಂಡುಬರುತ್ತದೆ. ದಿ.27/2/2007 ರಂದು ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ದೂರುದಾರರ ಪರವಾಗಿ ನ್ಯಾಯಾಲಯವು ಶಾಶ್ವತ ಪ್ರತಿಬಂಧಕಾಜ್ಞೆಯನ್ನು ನೀಡಿರುವುದು ಕಂಡುಬರುತ್ತದೆ. ಸದರಿ ತೀರ್ಪಿನ ವಿರುದ್ಧ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವ ಬಗ್ಗೆ ಕಡತದಲ್ಲಿ ಯಾವುದೇ ದಾಖಲಾತಿಗಳು ಕಂಡುಬರುತ್ತಿಲ್ಲ. ಸದರಿ ವಿಷಯವನ್ನು ಗಮನಿಸಿದಾಗ, ನ್ಯಾಯಾಲಯದಲ್ಲಿ ಶಾಶ್ವತ ಪ್ರತಿಬಂಧಕಾಜ್ಞೆ ಆದೇಶವಿದ್ದರೂ ಸಹ ಸದರಿ ಜಮೀನಿಗೆ ಸಂಬಂಧಪಟ್ಟಂತೆ ಎದುರುದಾರರು ಶಾಂತಮ್ಮ ಎನ್ನುವವರಿಗೆ ಮಂಜೂರು ಮಾಡಲು ಕ್ರಮ ವಹಿಸಿರುವುದು ಕಂಡುಬರುತ್ತದೆ. ಶಾಂತಮ್ಮ ಎನ್ನುವವರಿಗೆ ಮಂಜೂರು ಮಾಡಲಾದ ಜಮೀನು ಸ.ನಂ.29 ರ ಪೈಕಿ ಜಮೀನಾಗಿದ್ದು, ಶಾಶ್ವತ ಪ್ರತಿಬಂಧಕಾಜ್ಞೆಯನ್ನು ಕೂಡ ಸ.ನಂ.29 ರ ಪೈಕಿ ಜಮೀನಿಗೆ ನೀಡಲಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಶಾಶ್ವತ ಪ್ರತಿಬಂಧಕಾಜ್ಞೆ

ಇರುವ ಪ್ರದೇಶವನ್ನು ಗುರುತಿಸಿ ನಂತರ ಜಮೀನು ಮಂಜೂರು ಮಾಡುವ ಜವಾಬ್ದಾರಿ ಎದುರುದಾರರದಾಗಿರುತ್ತದೆ. ಸದರಿ ಕರ್ತವ್ಯವನ್ನು ನಿರ್ವಹಿಸುವಲ್ಲಿ ಎದುರುದಾರರು ನಿರ್ಲಕ್ಷ್ಯ ವಹಿಸಿದ್ದಾರೆಂದು ಕಂಡುಬರುತ್ತದೆ. 1ನೇ ಎದುರುದಾರರು ದಿ.22/7/11 ರಂದು ಕರ್ತವ್ಯಕ್ಕೆ ಬಂದಿರುವುದಾಗಿ ತಿಳಿಸಿದರೂ ಸಹ ಸಕ್ರಮಗೊಳಿಸಿದ ಆದೇಶವನ್ನು 1ನೇ ಎದುರುದಾರರೇ ಮಾಡಿರುವುದು ಕಂಡುಬರುತ್ತದೆ. ಆದ್ದರಿಂದ, ಅವರ ಆಕ್ಷೇಪಣೆಯನ್ನು ಪರಿಗಣಿಸಲು ಸಕಾರಣವಿಲ್ಲ.

11) ಮೇಲಿನ ಅಂಶಗಳನ್ನು ಗಮನಿಸಿದಾಗ, 1ನೇ ಎದುರುದಾರರಾದ ಭಾಸ್ಕರ್, 2ನೇ ಎದುರುದಾರರಾದ ನಿರಂಜನ್ ಆರಾಧ್ಯ, 3ನೇ ಎದುರುದಾರರಾದ ಮುನಿಕೃಷ್ಣಪ್ಪ ಮತ್ತು 4ನೇ ಎದುರುದಾರರಾದ ರಾಂಮೋಹನ್ ಇವರುಗಳು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಪಂಚಾಯಿತಿ ಕಾರ್ಯದರ್ಶಿ, ನ್ಯಾಮತಿ ಹಳ್ಳಿ ಗ್ರಾಮಪಂಚಾಯಿತಿ ಇವರನ್ನು 5ನೇ ಎದುರುದಾರರನ್ನಾಗಿ ತೋರಿಸಿದ್ದು, ಆದರೆ ಜಮೀನು ಮಂಜೂರು ಮಾಡಲು ಕ್ರಮ ವಹಿಸುವ ಸಂದರ್ಭದಲ್ಲಿ ಪಂಚಾಯತ್ ಕಾರ್ಯದರ್ಶಿಗಳ ಯಾವುದೇ ಪಾತ್ರ ಇರುವುದಿಲ್ಲವೆಂದು ಕಂಡುಬರುತ್ತದೆ ಮತ್ತು ಪಂಚಾಯತ್ ಕಾರ್ಯದರ್ಶಿಯನ್ನು ಪ್ರಕರಣದಿಂದ ಕೈಬಿಡಬೇಕೆಂದು ಕೋರಿ ದೂರುದಾರರು ಪತ್ರ ಬರೆದಿರುವುದೂ ಕೂಡ ಕಂಡುಬರುತ್ತದೆ. ಆ ಕಾರಣದಿಂದ 5ನೇ ಎದುರುದಾರರನ್ನು ಈ ಪ್ರಕರಣದಿಂದ ಕೈಬಿಡಲಾಗಿದೆ.

12) ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಶಾಂತಮ್ಮ ಎನ್ನುವವರಿಗೆ 2 ಬಾರಿ ಸರ್ಕಾರಿ ಜಮೀನು ಮಂಜೂರು ಮಾಡಲು ಮತ್ತು ನ್ಯಾಯಾಲಯವು ಸ.ನಂ.29 ರ 1.03 ಎಕರೆ ಜಮೀನಿನಲ್ಲಿ ಗೌರಮ್ಮ ಎನ್ನುವವರು ಸ್ವಾಧೀನದಲ್ಲಿದ್ದಾರೆಂದು ಅವರ ಪರವಾಗಿ ಶಾಶ್ವತ ಪ್ರತಿಬಂಧಕಾಜ್ಞೆ ಆದೇಶ ಹೊರಡಿಸಿದ್ದರೂ ಸಹ ಎದುರುದಾರರು ಅದನ್ನು ಪರಿಗಣಿಸದೆ ಶಾಂತಮ್ಮ ಎನ್ನುವವರ ಹೆಸರಿಗೆ ಜಮೀನು ಮಂಜೂರು ಮಾಡಿರುವುದರಿಂದ 1 ರಿಂದ 4ನೇ ಎದುರುದಾರರು ಕರ್ತವ್ಯಲೋಪ ಎಸಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

13) ಆದುದರಿಂದ, 1 ರಿಂದ 4ನೇ ಎದುರುದಾರರ ಆಕ್ಷೇಪಣೆಯು ಅವರ ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ ಮತ್ತು ದೂರುದಾರರ ದೂರನ್ನು ಅಲ್ಲಗಳೆಯಲು ಯಾವುದೇ ಸಮಂಜಸ/ಸಮರ್ಪಕ ಉತ್ತರವನ್ನು ತಮ್ಮ ಆಕ್ಷೇಪಣೆಯಲ್ಲಿ ನೀಡಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದೆ.

14) ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, 1 ರಿಂದ 4ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

15) ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ

ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ, 1 ರಿಂದ 4ನೇ ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

16) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 1.9.9.16.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**